# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

**ಬೆಂಗಳೂರು – 560 001**

**ಅಧಿಸೂಚನೆ ಸಂಖ್ಯೆ ವೈ/02/04 ದಿನಾಂಕ 09.11.2004**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ವ್ಯಾಪಾರದಾರನ ಅರ್ಹ ಷರತ್ತುಗಳು ಮತ್ತು ಕರ್ತವ್ಯಗಳು)

ವಿನಿಮಯಗಳು, 2004

ಪೀಠಿಕೆ

ವಿದ್ಯುಚ್ಛಕ್ತಿ ಅಧಿನಿಯಮ, 2003ರ 12ನೆಯ ಪ್ರಕರಣದಂತೆ ವಿದ್ಯುಚ್ಛಕ್ತಿಯ ವ್ಯಾಪಾರ ಮಾಡುವುದನ್ನು ಅನುಮತಿಸಿದ (ಲೈಸೆನ್ಸ್‌ಡ್) ಚಟುವಟಿಕೆಯೆಂದು ಪರಿಗಣಿಸಲಾಗಿದೆ, ಸೂಕ್ತವಾದ ಆಯೋಗವು ಅಧಿನಿಯಮದ 15ನೆಯ ಪ್ರಕರಣದಾನುಸಾರ ಅರ್ಜಿ ಸಲ್ಲಿಸಿದ ವ್ಯಕ್ತಿಗೆ ವಿದ್ಯುತ್ ವ್ಯಾಪಾರದ ಲೈಸೆನ್ಸನ್ನು ಮಂಜೂರು ಮಾಡಬೇಕು. ಅಧಿನಿಯಮದ 52ನೆಯ ಪ್ರಕರಣವು, ವ್ಯಾಪಾರದಾರನಿಗೆ ತಾಂತ್ರಿಕ ಅಗತ್ಯತೆ, ಸಾಕಷ್ಟು ಬಂಡವಾಳದ ಅಗತ್ಯ ಮತ್ತು ವ್ಯಾಪಾರದಾರನ ಸೂಕ್ತವಾದ ಧನಾನುಕೂಲ ವಿಶ್ವಾಸಾರ್ಹತೆ ಆಯೋಗವು ನಿಗದಿಪಡಿಸಬೇಕು. ಪ್ರಕರಣ 52(2) ರಡಿಯಲ್ಲಿ ಸೂಕ್ತವಾದ ಆಯೋಗವು ನಿಗದಿ ಪಡಿಸಿದ ಕರ್ತವ್ಯಗಳನ್ನು ಕೂಡ ವಿದ್ಯುಚ್ಛಕ್ತಿ ಮಾರಾಟದಾರನು ನಿರ್ವಹಿಸಬೇಕು. ವಿದ್ಯುಚ್ಛಕ್ತಿ ಅಧಿನಿಯಮದ ಪ್ರಕರಣ 181 ರೊಂದಿಗೆ ಓದಲಾದ ಪ್ರಕರಣ 52 ಮತ್ತು ಅದರ ಪರವಾಗಿ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದಿನ ವಿನಿಯಮಗಳನ್ನು ರಚಿಸಿದೆ :

1. **ಸಂಕ್ಷಿಪ್ತ ಶೀರ್ಷಿಕೆ, ಪ್ರಾರಂಭ ಮತ್ತು ವಿವರಣೆ**

   ಎ) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುಚ್ಛಕ್ತಿ ವ್ಯಾಪಾರದಾರನ ಅರ್ಹ ಷರತ್ತುಗಳು ಮತ್ತು ಕರ್ತವ್ಯಗಳು) ವಿನಿಯಮಗಳು, 2004 ಎಂದು ಕರೆಯತಕ್ಕದ್ದು.

   ಬಿ) ಈ ವಿನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

   ಸಿ) ಈ ವಿನಿಯಮಗಳು, ಕರ್ನಾಟಕ ರಾಜ್ಯದೊಳಗಿನ ವ್ಯಾಪಾರದಾರರಿಗೆ ಅನ್ವಯವಾಗತಕ್ಕದ್ದು.

2. ಪರಿಭಾಷೆಗಳು :

   ಎ) "ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003;

   ಬಿ) "ಅರ್ಜಿದಾರ" ಎಂದರೆ ರಾಜ್ಯದೊಳಗೆ ವ್ಯಾಪಾರಕ್ಕಾಗಿ ಲೈಸೆನ್ಸ್‌ನ ಮಂಜೂರಾತಿಗಾಗಿ ಆಯೋಗದಲ್ಲಿ ಅರ್ಜಿ ಸಲ್ಲಿಸಿದ ವ್ಯಕ್ತಿ,

   ಸಿ) "ಒಪ್ಪಂದ" ಎಂದರೆ ವಿದ್ಯುಚ್ಛಕ್ತಿ ವ್ಯಾಪಾರದಾರ ಮತ್ತು ವಿದ್ಯುಚ್ಛಕ್ತಿ ಮಾರಾಟಗಾರರು ಒಂದು ಕಡೆಯಾದರೆ ಮತ್ತು ವಿದ್ಯುಚ್ಛಕ್ತಿ ಮಾರಾಟಗಾರ ಮತ್ತು ವಿದ್ಯುಚ್ಛಕ್ತಿ ಖರೀದಿದಾರರು ಮತ್ತೊಂದೆಡೆಯಾಗಿ, ಅವರ ನಡುವಣ ಉಂಟಾದ ಒಪ್ಪಂದ.

   ಡಿ) "ಪ್ರಾಧಿಕಾರ" ಎಂದರೆ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ.

   ಇ) "ಆಯೋಗ" ಎಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

   ಎಫ್) "ವಿದ್ಯುಚ್ಛಕ್ತಿ ಮಾರಾಟಗಾರ" ಎಂದರೆ ಅಧಿನಿಯಮದ ಪ್ರಕರಣ 12ರಂತೆ ವಿದ್ಯುಚ್ಛಕ್ತಿ ಮಾರಾಟ ಕೈಗೊಳ್ಳಲು ಲೈಸೆನ್ಸ್‌ನ ಮಂಜೂರಾತಿ ಪಡೆದ ವ್ಯಕ್ತಿ.

   ಜಿ) "ಗ್ರಿಡ್ ಸಂಹಿತೆ" ಎಂದರೆ ಅಧಿನಿಯಮದ ಪ್ರಕರಣ 86ರ ಉಪಪ್ರಕರಣ (1)ರ ಕಂಡಿಕೆ (ಹೆಚ್) ರಂತೆ ಆಯೋಗ ನಿಗದಿ ಪಡಿಸಿದ ಗ್ರಿಡ್ ಸಂಹಿತೆ ಮತ್ತು ಅಧಿನಿಯಮದ ಉಪಬಂಧಗಳಂತೆ ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ನಿರ್ದಿಷ್ಟಪಡಿಸಿದ ಗ್ರಿಡ್ ಸಂಹಿತೆ ಎಂದೂ ಅರ್ಥ.

   ಹೆಚ್) "ರಾಜ್ಯದೊಳಗೆ ವ್ಯಾಪಾರ" ಎಂದರೆ ಕರ್ನಾಟಕ ರಾಜ್ಯದೊಳಗೆ ವಿದ್ಯುಚ್ಛಕ್ತಿ ವ್ಯಾಪಾರದಾರನಿಂದ ಆಗುವ ವಿದ್ಯುಚ್ಛಕ್ತಿಯ ಖರೀದಿ ಮತ್ತು ಮಾರಾಟ.

   ಐ) "ಕ.ವಿ.ಸು. ಅಧಿನಿಯಮ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ 1999 (1999 ರ ಅಧಿನಿಯಮ 25).

ಜೆ) "ಲೈಸೆನ್ಸು" ಎಂದರೆ ಅಧಿನಿಯಮ 14ನೆಯ ಪ್ರಕರಣದಂತೆ ವಿದ್ಯುಚ್ಛಕ್ತಿಯ ರಾಜ್ಯದೊಳಗೆ ವ್ಯಾಪಾರ ಕೈಗೊಳ್ಳಲು ವಿದ್ಯುಚ್ಛಕ್ತಿ ವ್ಯಾಪಾರಗಾರನಿಗೆ ಮಂಜೂರಾದ ಲೈಸೆನ್ಸು.

ಕೆ) "ಲೈಸೆನ್ಸುದಾರ" ಎಂದರೆ ಅಧಿನಿಯಮದ 14ನೆಯ ಪ್ರಕರಣದಂತೆ ವಿದ್ಯುಚ್ಛಕ್ತಿ ವ್ಯಾಪಾರಗಾರನಾಗಿ ರಾಜ್ಯದೊಳಗೆ ವಿದ್ಯುಚ್ಛಕ್ತಿಯ ವ್ಯಾಪಾರ ಕೈಗೊಳ್ಳಲು ಲೈಸೆನ್ಸಿನ ಮಂಜೂರಾತಿ ಪಡೆದ ವ್ಯಕ್ತಿ.

ಎಲ್) "ಅನುಮತಿ ಪಡೆದ ವ್ಯವಹಾರ" ಎಂದರೆ ಅಧಿನಿಯಮದ 14ನೆಯ ಪ್ರಕರಣದಂತೆ ವಿದ್ಯುಚ್ಛಕ್ತಿ ವ್ಯಾಪಾರ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಮಂಜೂರಾದ ಲೈಸೆನ್ಸು.

ಎಂ) ಮಾಲೀಕರ ಈಕ್ವಿಟಿ ಮತ್ತು ಮೀಸಲು ಮತ್ತು ಹೆಚ್ಚಳ ಯಾವುದಾದರೂ ಇದ್ದಲ್ಲಿ ಯಾವುದೇ ಸಮಯದ ಬಿಂದುವಿನಲ್ಲಿ ಒಟ್ಟು ಮೊತ್ತದಲ್ಲಿ "ನಿವ್ವಳ ಬೆಲೆ".

ಎನ್) "ಇತರ ವ್ಯವಹಾರ" ಎಂದರೆ ರಾಜ್ಯದೊಳಗೆ ವ್ಯಾಪಾರದ ಅನುಮತಿತ ವ್ಯವಹಾರ ಹೊರತುಪಡಿಸಿದ ಯಾವುದೇ ವ್ಯವಹಾರ.

ಒ) ಯಾವುದೇ ಕಂಪನಿ ಅಥವಾ ನಿಗಮಿತ ನಿಕಾಯ ಅಥವಾ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಅವರಲ್ಲಿ ಸೇರಿರಬಹುದು ಅಥವಾ ಇಲ್ಲದಿರಬಹುದು ಅಥವಾ ಕೃತಕ ನ್ಯಾಯಿಕ ವ್ಯಕ್ತಿಯಲ್ಲಿ "ವ್ಯಕ್ತಿ" ಸೇರತಕ್ಕದ್ದು.

ಪಿ) ವ್ಯಾಪಾರ ಎಂದರೆ ಮರುಮಾರಾಟಕ್ಕಾಗಿ ವಿದ್ಯುಚ್ಛಕ್ತಿಯ ಖರೀದಿ ಮತ್ತು ಅದರಂತೆ "ವ್ಯಾಪಾರ" ಪದವನ್ನು ಅನ್ವಯಿಸತಕ್ಕದ್ದು.

ಕ್ಯೂ) "ವರ್ಷ" ವೆಂದರೆ ಏಪ್ರಿಲ್ ಒಂದರಿಂದ ಆರಂಭವಾಗುವ ಒಂದು ಕ್ಯಾಲೆಂಡರ್ ವರ್ಷದಿಂದ ನಂತರದ ಕ್ಯಾಲೆಂಡರ್ ವರ್ಷದ ಮಾರ್ಚ್ 31ರ ವರೆಗಿನ 12 ತಿಂಗಳ ಅವಧಿ.

ಈ ವಿನಿಯಮಗಳಲ್ಲಿ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಅಧಿನಿಯಮ ಮತ್ತು ಕ.ವಿ.ಸು. ಅಧಿನಿಯಮ, 1999ರಲ್ಲಿರುವ ಅದೇ ಅರ್ಥಗಳನ್ನು ಹೊಂದಿರತಕ್ಕದ್ದು. ಅಧಿನಿಯಮ ಮತ್ತು ಕ.ವಿ.ಸು. ಅಧಿನಿಯಮಗಳ ನಡುವೆ ಯಾವುದೇ ಅಸಂಗತೆ ಉಂಟಾದ ಪ್ರಕರಣದಲ್ಲಿ ಅಧಿನಿಯಮದಲ್ಲಿ ನೀಡಿರುವ ಅರ್ಥವನ್ನೇ ಹೊಂದತಕ್ಕದ್ದು.

3. ವಿದ್ಯುಚ್ಛಕ್ತಿ ವ್ಯಾಪಾರದಾರನಿಗಾಗಿ ಅರ್ಹ ಷರತ್ತುಗಳು

3.1. ತಾಂತ್ರಿಕ ಅಗತ್ಯಗಳು

ಎ) ವಿದ್ಯುಚ್ಛಕ್ತಿ ವ್ಯಾಪಾರದಾರನು, ವಿದ್ಯುತ್ ವಲಯದಲ್ಲಿ ಕನಿಷ್ಠ 10 ವರ್ಷಗಳ ಅನುಭವ ಹೊಂದಿರುವ ಕನಿಷ್ಠ ಓರ್ವ ಇಂಜಿನಿಯರನನ್ನು ಮತ್ತು ವಿದ್ಯುಚ್ಛಕ್ತಿ ವ್ಯವಹಾರದಲ್ಲಿ ಕನಿಷ್ಠ ಹತ್ತು ವರ್ಷಗಳ ಆರ್ಥಿಕ/ವಾಣಿಜ್ಯ/ಲೆಕ್ಕಪತ್ರಗಳ ಅನುಭವದ ಹಿನ್ನೆಲೆಯಿರುವ ವ್ಯಕ್ತಿಯನ್ನು ನೇಮಿಸಿಕೊಳ್ಳತಕ್ಕದ್ದು.

ಬಿ) ವಿದ್ಯುಚ್ಛಕ್ತಿ ವ್ಯಾಪಾರದಾರನಿಂದ ನೇಮಕಗೊಂಡ ವ್ಯಕ್ತಿಗಳ ವಿವರಗಳನ್ನು ತನ್ನ ವ್ಯಾಪಾರದ ವ್ಯವಹಾರ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಆಯೋಗಕ್ಕೆ ಸಲ್ಲಿಸತಕ್ಕದ್ದು.

ಸಿ) ವ್ಯಾಪಾರ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ವಿದ್ಯುಚ್ಛಕ್ತಿ ವ್ಯಾಪಾರದಾರನು ವ್ಯಾಪಾರವನ್ನು ದಕ್ಷತೆಯಿಂದ ನಿರ್ವಹಿಸಲು ದೂರವಾಣಿ, ಫ್ಯಾಕ್ಸ್, ಕಂಪ್ಯೂಟರ್, ಅಂತರ್ಜಾಲದ ವ್ಯವಸ್ಥೆ ಇತ್ಯಾದಿಗಳಂತಹ ಸಾಕಷ್ಟು ಸಂಪರ್ಕದ ಸೌಲಭ್ಯ ಸ್ಥಾಪಿಸತಕ್ಕದ್ದು.

ಡಿ) ವಿದ್ಯುಚ್ಛಕ್ತಿ ವ್ಯಾಪಾರದಾರನು ತನ್ನದೇ ವೆಬ್‌ಸೈಟ್ ಹೊಂದಿರಬೇಕು ಮತ್ತು ಅದರಲ್ಲಿ ವ್ಯಾಪಾರವನ್ನು ನಿರ್ವಹಿಸುವುದಕ್ಕಾಗಿ ಅಗತ್ಯ ಮಾಹಿತಿ ಅಳವಡಿಸುತ್ತಿರಬೇಕು.

ಇ) ರಾಜ್ಯದೊಳಗೆ ವ್ಯಾಪಾರಕ್ಕಾಗಿ ಆಯೋಗ ಮಂಜೂರು ಮಾಡಿದ ಲೈಸೆನ್ಸಿನ ಮಾಹಿತಿಯಿದ್ದರೂ ಕೂಡ ವ್ಯಾಪಾರ ಚಟುವಟಿಕೆ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ತಾಂತ್ರಿಕ ಅಗತ್ಯಗಳನ್ನು ವಿದ್ಯುಚ್ಛಕ್ತಿ ವ್ಯಾಪಾರದಾರನು ಪಾಲಿಸತಕ್ಕದ್ದು.

3.2. ಪರ್ಯಾಪ್ತ ಬಂಡವಾಳವಿರಬೇಕಾದ ಅಗತ್ಯತೆ ಪೂರೈಸುವುದು ಮತ್ತು ಧನಾನುಕೂಲ ವಿಶ್ವಾಸಾರ್ಹತೆ (ಕ್ರೆಡಿಟ್ ವರ್ದಿನೆಸ್) :

ಎ) ಅರ್ಜಿದಾರನ ನಿವ್ವಳ ಧನಾನುಕೂಲವು ಈ ಮುಂದೆ ಉಲ್ಲೇಖಿಸಿರುವ ಮೊತ್ತಕ್ಕಿಂತ ಕಡಿಮೆಯಿರತಕ್ಕದ್ದಲ್ಲ :

| ಕ್ರಮ ಸಂಖ್ಯೆ | ವ್ಯಾಪಾರದ ಲೈಸೆನ್ಸಿನ ಪ್ರವರ್ಗ | ಪ್ರತಿ ವರ್ಷ ಮಾರಾಟ ಮಾಡಲು ಪ್ರಸ್ತಾಪಿಸಿರುವ ವಿದ್ಯುತ್ ಪ್ರಮಾಣ (ಮಿ.ಯು. ಗಳಲ್ಲಿ) | ನಿವ್ವಳ ಧನ (ಕೋಟಿ ರೂ. ಗಳಲ್ಲಿ) |
|---|---|---|---|
| 1 | ಎ | 100 ಮಿ.ಯು ಸೇರಿದಂತೆ, ಅದರವರೆಗೆ | 1.5 |
| 2 | ಬಿ | 101 ಮಿ.ಯು ನಿಂದ 200 ಮಿ.ಯುವರೆಗೆ | 3.00 |
| 3 | ಸಿ | 200 ಮಿ.ಯು ನಿಂದ 500 ಮಿ.ಯುವರೆಗೆ | 7.5 |
| 4 | ಡಿ | 500 ಮಿ.ಯುಗಿಂತ ಹೆಚ್ಚು | ಪ್ರತಿ ಹೆಚ್ಚುವರಿ ಮಿ. ಯುಗೆ 2 ಲಕ್ಷ ರೂ ಜೊತೆ 7.5 ಕೋಟಿ ರೂ. ಗಳು. |

ಬಿ. ಅರ್ಜಿದಾರನು, ಅರ್ಜಿ ಸಲ್ಲಿಸುವ ಸಮಯದಲ್ಲಿ ಆಯೋಗಕ್ಕೆ ತೃಪ್ತಿ ಬರುವ ರೀತಿಯಲ್ಲಿ ಲೆಕ್ಕ ಪರಿಶೋಧಕನಿಂದ ಪ್ರಮಾಣೀಕರಿಸಿದ ನಿವ್ವಳ ಧನವನ್ನು ತೋರಿಸತಕ್ಕದ್ದು.

ಸಿ. ವ್ಯಾಪಾರದ ಲೈಸೆನ್ಸುದಾರನ್ನು ತನ್ನ ಕಾರ್ಯಾಚರಣೆಯ ಎರಡನೆಯ ವರ್ಷದಿಂದ ಆಯೋಗಕ್ಕೆ ತೃಪ್ತಿ ಬರುವ ರೀತಿಯಲ್ಲಿ ಲೆಕ್ಕ ಪರಿಶೋಧಕನಿಂದ ವಿದ್ಯುಕ್ತವಾಗಿ ಪ್ರಮಾಣೀಕರಿಸಿದ ತನ್ನ ಧನಾನುಕೂಲ ವಿಶ್ವಾಸಾರ್ಹತೆಯನ್ನು ತೋರಿಸಬೇಕು.

ಡಿ. ಅರ್ಜಿದಾರನು ಆರ್‌ಬಿಐ ಅಥವಾ ಇತರ ಸಂಗತ ಪ್ರಾಧಿಕಾರದಿಂದ ಅಧಿಸೂಚಿತವಾದಂತೆ ಸುಸ್ತಿದಾರನಾಗಿರತಕ್ಕದ್ದಲ್ಲ.

ಇ) 500 ಮಿ.ಯುಗಿಂತ ಹೆಚ್ಚಿನ ವಾರ್ಷಿಕ ವ್ಯಾಪಾರ ಹೊಂದಿರುವ ವಿದ್ಯುಚ್ಛಕ್ತಿ ವ್ಯಾಪಾರದಾರನು ಇಡೀ ಲೈಸೆನ್ಸಿನ ಅವಧಿಯಾದ್ಯಂತ ಸ್ವತಂತ್ರವಾದ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಿಂದ ಕ್ರೆಡಿಟ್ ರೇಟಿಂಗ್‌ನ ಹೂಡಿಕೆಯ ಮಟ್ಟವನ್ನು ನಿರ್ವಹಿಸಲು ಪ್ರಯತ್ನಿಸತಕ್ಕದ್ದು.

ಎಫ್) ಎಲ್ಲಾ ವ್ಯಾಪಾರದ ವ್ಯವಹರಣೆಯನ್ನು ಭದ್ರತೆಯ ರೂಪದಲ್ಲಿ ಸೂಕ್ತ ಸಂದಾಯದ ಮೂಲಕ ಮಾಡತಕ್ಕದ್ದು.

4. ಲೈಸೆನ್ಸುದಾರನ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.

11. ವಿದ್ಯುಚ್ಛಕ್ತಿ ವ್ಯಾಪಾರದಾರನು ಈ ಮುಂದಿನ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಅನುಸರಿಸತಕ್ಕದು :

ಎ) ವಿದ್ಯುಚ್ಛಕ್ತಿ ವ್ಯಾಪಾರದಾರನು, ಮುಖ್ಯವಾಗಿ ಅಧಿನಿಯಮ, ನಿಯಮಗಳು ಮತ್ತು ವಿನಿಯಮಗಳು, ಗುಣಮಟ್ಟಗಳು, ಗ್ರಿಡ್ ಸಂಹಿತೆ, ರಾಷ್ಟ್ರೀಯ ವಿದ್ಯುಚ್ಛಕ್ತಿ ನೀತಿ ಮತ್ತು ಯೋಜನೆ, ರಾಜ್ಯ ಸರ್ಕಾರದ ನೀತಿಗಳು, ಆದೇಶಗಳು ಮತ್ತು ಆಗಾಗ್ಗೆ ಆಯೋಗ ಬಿಡುಗಡೆ ಮಾಡಿದ ನಿರ್ದೇಶನಗಳು ಮತ್ತು ಜಾರಿಯಲ್ಲಿರುವ ಕಾನೂನುಗಳ ಅಗತ್ಯಗಳೊಂದಿಗೆ ಪಾಲಿಸತಕ್ಕದ್ದು.

ಬಿ) ವಿದ್ಯುಚ್ಛಕ್ತಿ ವ್ಯಾಪಾರದಾರನು, ಕ.ವಿ.ನಿ.ಆ. (ಲೈಸೆನ್ಸ್ ನೀಡಿಕೆ) ವಿನಿಯಮಗಳು, 2004 ಮತ್ತು ಲೈಸೆನ್ಸಿನ ಷರತ್ತುಗಳಲ್ಲಿ ನಿಗದಿಪಡಿಸಿದವುಗಳನ್ನು ಪಾಲಿಸತಕ್ಕದ್ದು.

ಸಿ) ವ್ಯಾಪಾರದ ಪ್ರಮಾಣವು ಕಡಿಮೆ ಪ್ರವರ್ಗದಿಂದ ಹೆಚ್ಚಿನ ಪ್ರವರ್ಗಕ್ಕೆ ಉನ್ನತಗೊಂಡಾಗ, ಅಂತಹ ಯಾವುದೇ ಏರಿಕೆಗೊಂಡ ಒಂದು ತಿಂಗಳೊಳಗಾಗಿ ಮತ್ತು ಅದರಂತೆ ಏರಿಕೆಯಾದ ನಿವ್ವಳ ಧನವನ್ನು ಆಯೋಗಕ್ಕೆ ತಿಳಿಸತಕ್ಕದ್ದು. ನಿಗದಿಯಾದ ಸಮಯದೊಳಗೆ ಈ ಮೇಲಿನದನ್ನು ವರದಿ ಮಾಡದಿರುವಿಕೆಯು ಲೈಸೆನ್ಸಿನ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಅರ್ಥ ಕಲ್ಪಿಸತಕ್ಕದ್ದು.

ಡಿ) ರಾಜ್ಯದೊಳಗಿನ ವ್ಯಾಪಾರಕ್ಕಾಗಿ ಸೀಮಾಧನ, ಏನಾದರೂ ಇದ್ದರೆ ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಿರುವುದನ್ನು ವಿದ್ಯುಚ್ಛಕ್ತಿ ವ್ಯಾಪಾರದಾರನಿಗೂ ಅನ್ವಯಿಸತಕ್ಕದ್ದು.

ಇ) ವ್ಯಾಪಾರ ಸೀಮಾಧನವನ್ನು ನಿಗದಿ ಪಡಿಸಲು ಆಯೋಗವನ್ನು ಸಮರ್ಥಗೊಳಿಸಲು, ಅವಶ್ಯವಿರುವಲ್ಲಿ, ಆಯೋಗವು ನಿರ್ದಿಷ್ಟಪಡಿಸಬಹುದಾದ ವಿವರಗಳನ್ನು ವಿದ್ಯುಚ್ಛಕ್ತಿ ವ್ಯಾಪಾರದಾರನು ಸಲ್ಲಿಸತಕ್ಕುದು.

ಎಫ್) ಈ ವಿನಿಯಮಗಳಲ್ಲಿ ಆಯೋಗ ನಿರ್ದಿಷ್ಟಪಡಿಸಿದ ತಾಂತ್ರಿಕ ಅಗತ್ಯಗಳು, ಪರ್ಯಾಪ್ತ ಬಂಡವಾಳ ಮತ್ತು ಧನಾನುಕೂಲ ವಿಶ್ವಾಸಾರ್ಹತೆ ಅಗತ್ಯಗಳಿಂದ ವಿದ್ಯುಚ್ಛಕ್ತಿ ವ್ಯಾಪಾರದಾರನು ನಿರ್ವಹಿಸತಕ್ಕುದು.

ಜಿ) ಆಯೋಗವು ವಿದ್ಯುಚ್ಛಕ್ತಿ ವ್ಯಾಪಾರದಾರನ ದಾಖಲೆಗಳನ್ನು ತಪಾಸಣೆ ಮತ್ತು ಪರಿಶೀಲಿಸಲು ಯಾವುದೇ ವ್ಯಕ್ತಿಯನ್ನು ಪ್ರಾಧಿಕೃತಗೊಳಿಸಲು ಅರ್ಹತೆ ಹೊಂದಿರತಕ್ಕದು ಮತ್ತು ಅಂತಹ ವ್ಯಕ್ತಿಗೆ ಎಲ್ಲಾ ಅವಶ್ಯ ಸಹಾಯವನ್ನು ವಿದ್ಯುಚ್ಛಕ್ತಿ ವ್ಯಾಪಾರದಾರನು ನೀಡತಕ್ಕದು.

ಹೆಚ್) ವ್ಯಾಪಾರವನ್ನು ಉಭಯ ಪಕ್ಷಕಾರರ ನಡುವೆ ಸೂಕ್ತ ಒಪ್ಪಂದಗಳಿಗೆ ಬಂದು ನಿರ್ವಹಿಸತಕ್ಕದು. ನಡುವಿನ ಒಪ್ಪಂದಗಳಲ್ಲಿ ವ್ಯಾಪಾರದ ಮೂಲಕ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಅಥವಾ ವ್ಯಾಪಾರ ಮಾಡಿದ ವಿದ್ಯುಚ್ಛಕ್ತಿಗಾಗಿ ಸಂದಾಯದ ಅಗತ್ಯ ಸುರಕ್ಷೆಗಳನ್ನು ಸೇರಿಸತಕ್ಕದು. ಪಕ್ಷಕಾರರ ನಡುವೆ ಉಂಟಾಗಬಹುದಾದ ವ್ಯತ್ಯಾಸಗಳಿದ್ದರೂ ಕನಿಷ್ಠ ಏಳು ದಿನಗಳ ಮುನ್ಸೂಚನೆಯಿಲ್ಲದೆ ವಿದ್ಯುತ್ ಸರಬರಾಜಿನ ನಿರಂತರತೆಯಲ್ಲಿ ಅಡಚಣೆಯಾಗತಕ್ಕದ್ದಲ್ಲ.

ಐ) ವಿದ್ಯುಚ್ಛಕ್ತಿ ವ್ಯಾಪಾರದಾರನು ವಿದ್ಯುತ್ತಿನ ಪರಿಶೋಧನಾ ಉದ್ದೇಶಕ್ಕಾಗಿ ಸ್ಥಳಗಳಲ್ಲಿ ಸೂಕ್ತ ಮಾಪಕಗಳನ್ನು ಜೋಡಿಸಲಾಗಿದೆಯೆಂದು ಮತ್ತು ಪ್ರಾಧಿಕಾರ ನಿರ್ದಿಷ್ಟಪಡಿಸಿದ ವಿಶೇಷಗಳೊಂದಿಗೆ ಪಾಲನೆಯನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಮಾಪಕಗಳು ಕನಿಷ್ಠ 45 ದಿನಗಳ ಸಂಗ್ರಹ ಸೌಲಭ್ಯದೊಂದಿಗೆ ಪ್ರತಿ 15 ನಿಮಿಷಗಳ ಅಗತ್ಯ ಮಾನದಂಡಗಳನ್ನು ದಾಖಲಿಸುವ ಸಾಮರ್ಥ್ಯವಿರತಕ್ಕದ್ದು. ಮಾಪಕಗಳು ದೂರದವಾಚನ ಮತ್ತು ಸ್ಥಳೀಯವಾಗಿ ಮಾಹಿತಿ ಪಡೆಯುವ ಸೌಲಭ್ಯ ಹೊಂದಿರತಕ್ಕದು.

ಜೆ) ವಿದ್ಯುಚ್ಛಕ್ತಿ ವ್ಯಾಪಾರದಾರನು ಸಂದರ್ಭಾನುಸಾರ ವಿದ್ಯುತ್ ಪ್ರಸರಣ ಅಥವಾ ವೀಲಿಂಗ್‌ಗಾಗಿ ಪ್ರಸರಣ ಲೈಸೆನ್ಸುದಾರ/ರು ಮತ್ತು ವಿತರಣ ಲೈಸೆನ್ಸುದಾರ/ರೊಂದಿಗೆ ಅವಶ್ಯವಾದ ಒಪ್ಪಂದಗಳನ್ನು ಮಾಡಿಕೊಂಡಿರತಕ್ಕದು.

ಕೆ) ವಿದ್ಯುಚ್ಛಕ್ತಿ ವ್ಯಾಪಾರವು, ಮುಂದಿನ ಐದು ವರ್ಷಗಳಲ್ಲಿ, ತಿಂಗಳೊಂದರಲ್ಲಿ ನಿರ್ವಹಿಸಬಹುದಾದ ಗರಿಷ್ಠ ವ್ಯಾಪಾರ ಮತ್ತು ಅದರ ಮಾರಾಟದ ಭವಿಷ್ಯದ ಯೋಜನೆಗಳನ್ನು ಆಯೋಗದಲ್ಲಿ ಘೋಷಿಸಿಕೊಳ್ಳತಕ್ಕದು.

ಎಲ್) ವಿದ್ಯುಚ್ಛಕ್ತಿ ವ್ಯಾಪಾರದಾರನು, ಲೈಸೆನ್ಸಿನ ಷರತ್ತುಗಳಲ್ಲಿ ನಿರ್ದಿಷ್ಟಪಡಿಸಿದ ಕಾಲ ಸೂಚಿಯನುಸಾರ ಈ ವಿನಿಯಮಗಳಲ್ಲಿ ನಿಗದಿಪಡಿಸಿದಂತೆ ಲೈಸೆನ್ಸು ಫೀಜನ್ನು ಸಂದಾಯಮಾಡತಕ್ಕದು. ವ್ಯಾಪಾರದ ಪ್ರಮಾಣವು ಕಡಿಮೆ ಪ್ರವರ್ಗದಿಂದ ಹೆಚ್ಚಿನ ಪ್ರವರ್ಗಕ್ಕೆ ಉನ್ನತಿಗೊಂಡಲ್ಲಿ, ಅದರಂತೆ, ನಿರ್ದಿಷ್ಟಪಡಿಸಿದ ಲೈಸೆನ್ಸು ಫೀಜನ್ನು ಲೈಸೆನ್ಸುದಾರನು ಸಂದಾಯ ಮಾಡತಕ್ಕದು.

ಎಂ) ವಿದ್ಯುಚ್ಛಕ್ತಿ ಉದ್ಯಮದಲ್ಲಿ ಸ್ಪರ್ಧೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಕಾರಣ ಅಥವಾ ಕಾರಣಗಳ ಸಂಬಂಧವಿರುವ ತನ್ನ ಪರಮಾಧಿಕಾರ ಸ್ಥಿತಿಯ ದುರುಪಯೋಗವಾಗುವ ಯಾವುದೇ ಒಪ್ಪಂದ ಅಥವಾ ಸಂಯೋಗಕ್ಕಾಗಿ ಒಪ್ಪಂದಕ್ಕೆ ಅಂತಹ ಲೈಸೆನ್ಸುದಾರರು ಬಂದರೆ ಅಂತಹ ವಿದ್ಯುಚ್ಛಕ್ತಿ ವ್ಯಾಪಾರದಾರನಿಗೆ ಆಯೋಗವು ಅಂತಹ ನಿರ್ದೇಶನಗಳನ್ನು ನೀಡಬಹುದಾಗಿದೆ ಮತ್ತು ಅಂತಹ ನಿರ್ದೇಶನಗಳನ್ನು ಲೈಸೆನ್ಸುದಾರನು ಪಾಲಿಸತಕ್ಕದ್ದು.

ಎನ್) ವಿದ್ಯುಚ್ಛಕ್ತಿ ವ್ಯಾಪಾರದಾರನು ರಾಜ್ಯ ಲೋಡ್ ಡಿಸ್ಪ್ಯಾಚ್ ಸೆಂಟರ್ (ಎಸ್ ಎಲ್ ಡಿ ಸಿ) ರೀಜನಲ್ ಲೋಡ್ ಡಿಸ್ಪ್ಯಾಚ್ ಸೆಂಟರ್ ಮತ್ತು ನ್ಯಾಷನಲ್ ಲೋಡ್ ಡಿಸ್ಪ್ಯಾಚ್ ಸೆಂಟರ್ ಹಾಗೂ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರಗಳು ನೀಡುವ ಯಾವುದೇ ನಿರ್ದೇಶನವನ್ನು ಪಾಲಿಸತಕ್ಕದ್ದು. ಎಸ್ ಎಲ್ ಡಿ ಸಿ ಯು ಈ ಸಂಬಂಧದಲ್ಲಿ ಇತರ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸತಕ್ಕದ್ದು.

ಒ) ವಿದ್ಯುಚ್ಛಕ್ತಿ ವ್ಯಾಪಾರದಾರನು, ಆಯೋಗ ನಿರ್ದಿಷ್ಟಪಡಿಸಿದಂತೆ ರಾಜ್ಯದೊಳಗಿನ ವ್ಯವಹಾರಕ್ಕಾಗಿ ಪ್ರತ್ಯೇಕ ಲೆಕ್ಕ ಪತ್ರಗಳನ್ನು ನಿರ್ವಹಿಸತಕ್ಕದ್ದು.

ಪಿ) ವಿದ್ಯುಚ್ಛಕ್ತಿ ವ್ಯಾಪಾರದಾರನು, ಅಧಿನಿಯಮದ 66ನೆಯ ಪ್ರಕರಣದಂತೆ ಕಾಲಕಾಲಕ್ಕೆ ಆಯೋಗವು ನಿರ್ದಿಷ್ಟಪಡಿಸಿದ ಅಗತ್ಯಗಳನ್ನು ಪಾಲಿಸತಕ್ಕದ್ದು.

4.2. ಲೈಸೆನ್ಸು ಫೀಜು :

ವಿದ್ಯುಚ್ಛಕ್ತಿ ವ್ಯಾಪಾರದಾರನು, ಈ ಮೂಲಕ ನಿರ್ದಿಷ್ಟ ಪಡಿಸಿರುವ ಮೊತ್ತವನ್ನು ಲೈಸೆನ್ಸಿನ ವಾರ್ಷಿಕ ಫೀಜನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇದರ ಪರವಾಗಿ ಹುಂಡಿ/ಪಾವತಿ ಆದೇಶ ಪಡೆದು ಆಯೋಗಕ್ಕೆ ಸಂದಾಯ ಮಾಡತಕ್ಕದ್ದು :

| ವ್ಯಾಪಾರಿ ಲೈಸೆನ್ಸುದಾರನ ಪ್ರವರ್ಗ | ಪ್ರತಿ ವರ್ಷ ವ್ಯಾಪಾರ ಮಾಡಲಿರುವ ಉದ್ದೇಶಿತ ವಿದ್ಯುಚ್ಛಕ್ತಿ ಪ್ರಮಾಣ (ಮಿ. ಯು. ಗಳಲ್ಲಿ) | ಲೈಸೆನ್ಸು ಫೀಜು (ಲಕ್ಷ ರೂ. ಗಳಲ್ಲಿ) |
|---|---|---|
| ಎ | 100 ಮಿ.ಯು. ಸೇರಿದಂತೆ ಅದರವರೆಗೆ | 1.00 |
| ಬಿ | 101 ಮಿ.ಯು ನಿಂದ 200 ಮಿ.ಯುವರೆಗೆ | 2.00 |
| ಸಿ | 201 ಮಿ.ಯು ನಿಂದ 500 ಮಿ.ಯು ವರೆಗೆ | 5.00 |
| ಡಿ | 500 ಮಿ.ಯು ಗಿಂತ ಮೇಲಿನದು. | 7.00 |

ಪರಂತು, ವರ್ಷದ ಭಾಗಕ್ಕಾಗಿ ಲೈಸೆನ್ಸು ಫೀಜನ್ನು ದಿನಗಳ ಸಂಖ್ಯೆಯಾಧಾರದ ಮೇಲೆ ಆ ಪ್ರಮಾಣದಲ್ಲಿಯೇ ಸಂದಾಯ ಮಾಡತಕ್ಕದ್ದು.

**4.3. ಆಯೋಗ ಮತ್ತು ಇತರರಿಗೆ ಮಾಹಿತಿ ಪೂರೈಕೆ :**

ವಿದ್ಯುಚ್ಛಕ್ತಿ ವ್ಯಾಪಾರದಾರನು ಯಾವಾಗಲೂ :

ಎ) ಆಯೋಗವು ಆಗಾಗ್ಗೆ ಕೋರಬಹುದಾದ ಅಂತಹ ಮಾಹಿತಿಯ ಪೂರೈಕೆ;

ಬಿ) ಲೈಸೆನ್ಸುದಾರನ ಕಾರ್ಯ ಕ್ಷಮತೆ ಮತ್ತು ಲೈಸೆನ್ಸನ ನಿಬಂಧನೆ ಮತ್ತು ಷರತ್ತುಗಳ ಪಾಲನೆ ಹಾಗೂ ಶಾಸನೀಯ ಅಥವಾ ನಿಯಂತ್ರಕ ಅಗತ್ಯಗಳನ್ನು ನಿರ್ವಹಿಸಲು ಆಗಾಗ್ಗೆ ಅಗತ್ಯಪಡಿಸಬಹುದಾದ ಮಾಹಿತಿಯ ಸಲ್ಲಿಕೆ;

ಸಿ) ವಿದ್ಯುಚ್ಛಕ್ತಿ ವ್ಯಾಪಾರದಾರನು ಎಸ್ ಎಲ್ ಡಿ ಸಿ ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಎಸ್ ಎಲ್ ಡಿ ಸಿ ಗೆ ಅಂತಹ ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಎಸ್ ಎಲ್ ಡಿ ಸಿ ಗೆ ಅಂತಹ ಮಾಹಿತಿಯನ್ನು ಸಲ್ಲಿಸಿದ 24 ಗಂಟೆಯೊಳಗಾಗಿ ಮಾಹಿತಿಯಲ್ಲಿನ ಬದಲಾವಣೆಗಳನ್ನು ಒದಗಿಸತಕ್ಕದ್ದು.

ಪರಂತು, ವರದಿಗಳಲ್ಲಿ ಉಲ್ಲೇಖಿಸಿರುವಂತೆ ವ್ಯಾಪಾರ ಮಾಡಿದ ವಿದ್ಯುತ್ತಿನ ಪ್ರಮಾಣವನ್ನು ರಾಜ್ಯ ಲೋಡ್ ಡಿಸ್ಪ್ಯಾಚ್ ಸೆಂಟರ್ ತಪಾಸಣೆ ಮಾಡತಕ್ಕದ್ದು ಮತ್ತು ಆಯೋಗವು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ತ್ರೈಮಾಸಿಕ ಆಧಾರದ ಮೇಲೆ ಆಯೋಗಕ್ಕೆ ವರದಿ ಸಲ್ಲಿಸತಕ್ಕದ್ದು.

ಡಿ) ವಿದ್ಯುಚ್ಛಕ್ತಿ ವ್ಯಾಪಾರದಾರನು ಮಾಹಿತಿ ಮತ್ತು ತನ್ನ ವ್ಯವಹಾರದ ಯೋಜನೆಯನ್ನು ಆಯೋಗಕ್ಕೆ ಹಾಗೂ ಕೋರಿಕೆ ಮೇರೆಗೆ ಎಸ್ ಎಲ್ ಡಿ ಸಿ ಗೆ ವಾರ್ಷಿಕವಾಗಿ ಒದಗಿಸ ತಕ್ಕದ್ದು.

ಇ) ವಿದ್ಯುಚ್ಛಕ್ತಿ ವ್ಯಾಪಾರದಾರನು ಅಧಿನಿಯಮದ 73(1) ಮತ್ತು 74ನೆಯ ಪ್ರಕರಣ ಅಗತ್ಯ ಪಡಿಸುವಂತೆ ಯಾವುದೇ ಮಾಹಿತಿಯನ್ನು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

**4.4. ಆಯೋಗಕ್ಕೆ ವರದಿ ಸಲ್ಲಿಕೆ : ವಿದ್ಯುಚ್ಛಕ್ತಿ ವ್ಯಾಪಾರದಾರನು ಆದಷ್ಟು ಬೇಗನೆ ಆಯೋಗಕ್ಕೆ ವಾಸ್ತವವಾದ ವರದಿಯನ್ನು ಸಲ್ಲಿಸತಕ್ಕದ್ದು :**

ಎ) ಅಧಿನಿಯಮ, ನಿಯಮಗಳು ಮತ್ತು ಆಯೋಗ ಬಿಡುಗಡೆ ಮಾಡಿದ ವಿನಿಯಮಗಳು ನಿರ್ದೇಶನಗಳು/ಆದೇಶಗಳು, ಗ್ರಿಡ್ ಕೋಡ್, ಒಪ್ಪಂದ ಅಥವಾ ಲೈಸೆನ್ಸುಗಳಂತೆ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಸಾಮರ್ಥ್ಯದ ಮೇಲೆ ಬಾಧಕವಾಗುವ ಸಂದರ್ಭಗಳಲ್ಲಿ ಯಾವುದೇ ಗಮನಾರ್ಹ ಬದಲಾವಣೆಗಳು.

ಬಿ) ಅಧಿನಿಯಮ, ನಿಯಮಗಳು ಮತ್ತು ಆಯೋಗ ಬಿಡುಗಡೆ ಮಾಡಿದ ವಿನಿಯಮಗಳು, ನಿರ್ದೇಶನಗಳು/ಆದೇಶಗಳು ಹಾಗೂ ಗ್ರಿಡ್‌ಕೋಡ್, ಒಪ್ಪಂದ ಅಥವಾ ಲೈಸೆನ್ಸನ ಉಪಬಂಧಗಳ ಯಾವುದೇ ಭೌತಿಕ ಉಲ್ಲಂಘನೆ.

ಸಿ) ಪಾಲು ಹೊಂದಿರುವ ರೀತಿ, ಮಾಲೀಕತ್ವ ಅಥವಾ ಲೈಸೆನ್ಸುದಾರನ ನಿರ್ವಹಣೆಯಲ್ಲಿ ಯಾವುದೇ ಪ್ರಮುಖ ಬದಲಾವಣೆ.

5. **ವಿವಾದವನ್ನು ಬಗೆಹರಿಸುವುದು.**

ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳ ನಡುವಿನ ವಿದ್ಯುಚ್ಛಕ್ತಿ ವ್ಯಾಪಾರಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಬಗೆಹರಿಸುವುದಕ್ಕಾಗಿ ಆಯೋಗಕ್ಕೆ ಒಪ್ಪಿಸತಕ್ಕದ್ದು. ಪಕ್ಷಕಾರರ ನಡುವಿನ ವಿವಾದ ನಿರ್ಣಯಕ್ಕೆ ಸಂಬಂಧಿಸಿದ ಕ್ರಮಕ್ಕೆ ಸಂಬಂಧಿಸಿದ ಅಗತ್ಯ ಉಪಬಂಧಗಳನ್ನು ಪಕ್ಷಕಾರರ ನಡುವಿನ ಒಪ್ಪಂದಗಳಲ್ಲಿ ಸೇರಿಸತಕ್ಕದ್ದು.

6. ಸಂಕೀರ್ಣ

6.1. ತೊಡಕುಗಳ ನಿವಾರಣೆಗೆ ಇರುವ ಅಧಿಕಾರ :

ಎ) ತೊಡಕುಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಆಯೋಗಕ್ಕೆ ಅಗತ್ಯ ಅಥವಾ ಸಮಯೋಚಿತವೆಂದು ತೋರುವ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಉಪಬಂಧಗಳಿಗೆ ಅಸಂಗತವಾಗದಂತೆ, ಈ ವಿನಿಯಮಗಳ ಯಾವುದೇ ಉಪಬಂಧಗಳನ್ನು ಜಾರಿನೀಡುವಲ್ಲಿ ಯಾವುದೇ ಅಡಚಣೆ ಉಂಟಾದ ಪ್ರಕರಣದಲ್ಲಿ ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿದ್ಯುಚ್ಛಕ್ತಿ ವ್ಯಾಪಾರದಾರನಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಬಹುದಾಗಿದೆ.

ಬಿ) ವಿದ್ಯುಚ್ಛಕ್ತಿ ವ್ಯಾಪಾರದಾರನು, ಈ ವಿನಿಯಮಗಳನ್ನು ಜಾರಿಗೊಳಿಸುವಾಗ ಎದುರಾಗಬಹುದಾದ ಅಡಚಣೆಗಳನ್ನು ತೊಡೆಯಲು ಆಯೋಗಕ್ಕೆ ಅರ್ಜಿ ಸಲ್ಲಿಸಿ, ಸೂಕ್ತ ಆದೇಶವನ್ನು ಪಡೆಯಬಹುದಾಗಿದೆ.

6.2. ಆದೇಶಗಳು ಮತ್ತು ಆಚರಣಾ ನಿರ್ದೇಶನಗಳ ಬಿಡುಗಡೆ : ವಿದ್ಯುಚ್ಛಕ್ತಿ ಅಧಿನಿಯಮ, 2003 ಮತ್ತು ಈ ವಿನಿಯಮಗಳ ಉಪಬಂಧಗಳಿಗೊಳಪಟ್ಟು ಆಯೋಗವು ಕಾಲಕಾಲಕ್ಕೆ ಈ ವಿನಿಯಮಗಳ ಅನುಷ್ಠಾನ ಮತ್ತು ಅನುಸರಿಸಬೇಕಾದ ವಿಧಾನಗಳಿಗೆ ಸಂಬಂಧಿಸಿದಂತೆ ಆದೇಶಗಳು ಮತ್ತು ಆಚರಣಾ ನಿರ್ದೇಶನಗಳನ್ನು ನೀಡಬಹುದಾಗಿದೆ.

6.3. ತಿದ್ದುಪಡಿ ಅಧಿಕಾರ :

ಆಯೋಗವು, ಅಗತ್ಯ ವ್ಯವಹರಣೆಗಳನ್ನು ಅನುಸರಿಸಿದ ನಂತರ ಈ ವಿನಿಯಮಗಳ ಯಾವುದೇ ಉಪಬಂಧಗಳಿಗ ಕಾಲಕಾಲಕ್ಕೆ ಸೇರಿಸುವ, ವ್ಯತ್ಯಾಸ, ಮಾರ್ಪಡಿಸುವ ಅಥವಾ ತಿದ್ದುಪಡಿ ಮಾಡಬಹುದಾಗಿದೆ.

ಆಯೋಗದ ಆದೇಶದ ಮೇರೆಗೆ

ಸಹಿ

ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ